ಮಾತೃಭಾಷೆ ಮತ್ತು ಪರಿಸರ ಒಂದು ಸಮುದಾಯಕ್ಕೆ ಮತ್ತು ಆ ಸಮುದಾಯದ ಸೂಕ್ಷ್ಮ ವ್ಯಕ್ತಿಗಳಿಗೆ ಕಾಣುವ ಹಾಗೆ ಒಂದು ಅಂತರರಾಷ್ಟ್ರೀಯ ಮನಸ್ಸಿಗೆ ಕಾಣುವುದಿಲ್ಲ. ಆ ಮನಸ್ಸಿಗೆ ಎಲ್ಲ ಒಂದೆ, ತಲೆ ಹೃದಯ ಎರಡೂ ಇಲ್ಲದ ವಸ್ತು. ಆದ್ದರಿಂದಲೇ ಅಂತರರಾಷ್ಟ್ರೀಯ ಪ್ರಜ್ಞೆಯೇ ಒಂದು ಅಸ್ತ್ರವಾಗುತ್ತಿರುವಾಗ ನಾನು ನಮ್ಮ ಸ್ಥಳೀಯ, ಕೋಮಲ, ವೈಯಕ್ತಿಕ ಕೃತಿಗಳನ್ನು ರಕ್ಷಿಸಿಕೊಳ್ಳಬೇಕಾದ್ದು ನಮ್ಮ ಕರ್ತವ್ಯ.

ಇದನ್ನು ನಾನು ಬರೀ ಊಹೆಯಾಗಿ ಹೇಳುತ್ತಿಲ್ಲ. ಬೇಂದ್ರೆಯವರ ಕನ್ನಡತನ, ಕನ್ನಡಿಗರಿಗೆ ಮಾತ್ರ ಅರ್ಥವಾಗಬಲ್ಲ ವೈಶಿಷ್ಟ್ಯ, ಗಮನಿಸಿ ಹೇಳುತ್ತಿದ್ದೇನೆ. ಅವರ 'ಜೋಗಿ'ಯನ್ನು ನೋಡಿ. ಅಲ್ಲಿರುವ ವಿವರಗಳನ್ನು ಚರ್ಚಿಸಿದರೆ ಯಾವ ವಿದೇಶೀಯನಿಗೂ ಅದರ ಅರ್ಥ ತಿಳಿಯುವುದಿಲ್ಲ. ಅದನ್ನು ಸ್ಥೂಲವಾಗಿ ಹೋಲುವ ಕವನಕ್ಕಾಗಿ ಹುಡುಕಿ ಹೇಳಬೇಕಾಗುತ್ತದೆ. ಕೇಳುವವನು ಒಬ್ಬ ಕಿವುಡ ಇನ್ನೊಬ್ಬ ಕಿವುಡನ ಮಾತನ್ನು ಅರ್ಥಮಾಡಿಕೊಳ್ಳುವಂತೆ ತಪ್ಪಾಗಿ ಅರ್ಥಮಾಡಿಕೊಳ್ಳುತ್ತಾನೆ. ಬೇಂದ್ರೆಯವರ ಕಲೆ ಹೀಗೆ ಅಂತರರಾಷ್ಟ್ರೀಯ ಕಿವುಡರ ಕೈಯಲ್ಲಿ ಜೀವ ಕಳೆದುಕೊಳ್ಳುತ್ತದೆ.

ದಿಲ್ಲಿಯಿಂದ ಆಡಳಿತ ನಡೆಸುವ ಹುಂಬರಿಗೆ ಕಾಶ್ಮೀರದ ಚೇತನ ತಿಳಿಯದಿರುವುದು ಇವತ್ತಿನ ಸಮಸ್ಯೆ. ಇಂಡಿಯಾ–ಕಾಶ್ಮೀರದ ಸಮಸ್ಯೆ ಇಲ್ಲಿದೆಯೇ ಹೊರತು ಬೇರೆ ಕಡೆ ಇಲ್ಲ. ಕಾಶ್ಮೀರದ ಪರಿಸರ, ಕಲೆ, ಸಂಸ್ಕೃತಿ ಪಾಕಿಸ್ತಾನದಲ್ಲೂ ಇಲ್ಲ. ಭಾರತದಲ್ಲೂ ಇಲ್ಲ. ಕಾಶ್ಮೀರಿಗಳಿಗೆ ಇದು ಜೀವ. ಇದನ್ನು ತಿಳಿದುಕೊಳ್ಳಬೇಕು. ಕಾಶ್ಮೀರದಲ್ಲೇ ಇರುವ ಅಧಿಕಾರದಾಹದ ದುಷ್ಟರು ಮತ್ತು ದಿಲ್ಲಿಯಲ್ಲಿರುವ ಕುರುಡರು ಬೆಳೆಸುತ್ತಿರುವ ಜಗಳ ಕಾಶ್ಮೀರ, ದಿಲ್ಲಿ ಎರಡೂ ಕಡೆಯ ಕವಿಹೃದಯಿಗಳನ್ನು ನಾಶಮಾಡಬಲ್ಲದು. ಹಾಗೆಯೇ ನಮ್ಮಲ್ಲಿಯ ಬೇಂದ್ರೆಗಳನ್ನು ಕೂಡ.

ಈ ಲೋಕದ ವಿಪರ್ಯಾಸಗಳಲ್ಲಿ ಒಂದು, ಇಲ್ಲಿಯ ಮಹಾ ಶ್ರೀಮಂತ, ಮಹಾ ಅಧಿಕಾರಸ್ಥ, ಮಹಾ ಸುಂದರಿ, ಮಹಾ ಸುಂದರ ಯಾರೂ ಪಡೆಯದ ನೆಮ್ಮದಿಯನ್ನು ಒಬ್ಬ ಕವಿ ಪಡೆಯಲು ಸಾಧ್ಯ ಎಂಬುದು. ಸದಾ ಜೀವಸೆಲೆಗಾಗಿ ಹುಡುಕಿ ಜೀವಂತ ಮಾತುಗಳಲ್ಲಿ ಕಂಡರಿಸುವ ಕವಿ ಒಬ್ಬ ಜೋಗಿ, ಸುಡುಗಾಡು ಸಿದ್ಧ, ಜೋಗತಿ, ಬಡ ಜಾನಪದ ಹಾಡುಗಾರ, ದಿಕ್ಕೆಟ್ಟ ಮುದುಕಿ – ಇವರಲ್ಲಿ ತನ್ನ ಸಮಸ್ಯೆಗಳಿಗೆ ಪರಿಹಾರ ಕಂಡುಕೊಳ್ಳಬಲ್ಲ. ಈ ಜೀವಸೆಲೆ ಕಂಡ ಕವಿಗೆ ಬೇರೆಯದು ಹಿಡಿಸುವುದಿಲ್ಲ. ಇದು ರೋಮಿಯೋ ಜೂಲಿಯೆಟ್‌ಳನ್ನು ಅರ್ಪಣೆ ಮಾಡಿಕೊಂಡಿರುವಂತೆ. ಜೂಲಿಯೆಟ್ ತರಹದ ಇನ್ನೊಬ್ಬಳನ್ನು ಆತ ಇಷ್ಟಪಡಲಾರ. ಅವಳ ವಿಶಿಷ್ಟ ಚರ್ಯೆಯುಳ್ಳ ಇನ್ನೊಬ್ಬಳಿಗೆ ಒಲಿಯಲಾರ. ಅವನಿಗೆ ಜೂಲಿಯೆಟ್ ಅನನ್ಯ, ಏಕಮಾತ್ರ ಹುಡುಗಿ. ಅವಳಲ್ಲೇ ಆತನ ಧನ್ಯತೆ. ಹಾಗೆ ಕವಿಯ ಕಾಳಜಿ ಮತ್ತು ಕೃತಿ, ಆತನ ಒಂದು ಕೃತಿ ಮಾರ್ಕೆಟ್ಟಿನ ಸರಕಾಗುವುದು ಕಷ್ಟ. ಆ ಕೃತಿಯ ಸರ್ವಕಾಲೀನ ಗುಣವನ್ನು ತೊಡೆದುಹಾಕುವುದು ಅಸಾಧ್ಯ.

ಹಾಗೆ ತೊಡೆದು ಹಾಕುವ ಪ್ರಯತ್ನದಲ್ಲಿ ಅಂತರರಾಷ್ಟ್ರೀಯ ಪ್ರಜ್ಞೆಯ ಆಧುನಿಕ ಪ್ರಪಂಚ ಜಡವಾಗುತ್ತಾ ಹೋದರೆ ಆಶ್ಚರ್ಯವಿಲ್ಲ. ಸ್ಟಾರ್ ಟೀವಿಯಲ್ಲಿ ಬರುವ ಸುಂದರ, ಫ್ಯಾಶನಬಲ್ ಮುಖಗಳನ್ನು ನೀವು ನೋಡಿರಬಹುದು. ಆ ಮುಖಗಳು ಮತ್ತು ದೇಹಗಳು ಮೈಖೇಲ್ ಜಾಕ್‌ಸನ್ನನ, ಎಲ್ವಿಸ್ ಪ್ರೆಸ್ಲಿಯ ಹಾಡುಗಳಂತೆ. ಮಾರ್ಕೆಟ್ಟಿನ ವಸ್ತುಗಳು. ಕುರೂಪವನ್ನು ಕಟ್ಟಿಕೊಂಡೇ ಬಂದ ಮುಖವಾಡಗಳು.

ಈ ಜಗತ್ತು ಕುರೂಪವಾಗದಿರಬೇಕಾದರೆ ನಮ್ಮ ಬದುಕು ಬೇಂದ್ರೆಯವರಂಥ ಕವಿಗಳ ಕಾವ್ಯದಿಂದ, ಕಾಣ್ಕೆಯಿಂದ ಶ್ರೀಮಂತವಾಗಬೇಕು. ನಮ್ಮ ವ್ಯಕ್ತಿತ್ವ ಸ್ಥಳೀಯ ಅಮೃತದಿಂದ ಗಟ್ಟಿಯಾಗಬೇಕು.

ಇಲ್ಲಿ ಇನ್ನೂ ಹೇಳಬಹುದು. ಆದರೆ ನಾವು ಪಾರಿಭಾಷಿಕ ಶಬ್ದಗಳ ಭಾರದಿಂದ ಬೇಂದ್ರೆಯವರ ಕೋಮಲ ಚೇತನವನ್ನು ಕುಗ್ಗಿಸುವುದು ಬೇಡ. ಅವರ ಕಲ್ಪವೃಕ್ಷ ವೃಂದಾವನಂಗಳಲಿ, ಜೋಗಿ, ಹುಬ್ಬಳ್ಳಿಯಾಂವ, ಮಾಯಾಕಿನ್ನರಿ, ಬೆಳಗು, ಮುಂತಾದ ಹತ್ತಾರು ಕವನಗಳಿಂದ ನನ್ನ ಮೇಲಿನ ವಾದವನ್ನು ಸಮರ್ಥಿಸಬಲ್ಲೆ...

'ಲಂಕೇಶ್ ಪ್ರಕಾಶನ'ದ 'ಸಾಹಿತಿ ಸಾಹಿತ್ಯ ವಿಮರ್ಶೆ' ಕೃತಿಯ ಒಂದು ಬರಹ